# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| 1 | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : | 1403 |
| 2 | ಸದಸ್ಯರ ಹೆಸರು: | ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| 3 | ವಿಷಯ | ರಾಮನಗರ ಮಾರುಕಟ್ಟೆಯಲ್ಲಿ ನಡೆದ ಅವ್ಯವಹಾರ ಮತ್ತು ಬೆಂಬಲ ಬೆಲೆಯ ಹಣ ದುರುಪಯೋಗದ ಬಗ್ಗೆ. |
| 4 | ಉತ್ತರಿಸುವ ದಿನಾಂಕ | 30.12.2022 |
| 5 | ಉತ್ತರಿಸುವವರು | ಮಾನ್ಯ ರೇಷ್ಮೆ, ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವರು |
| | **ಪ್ರಶ್ನೆಗಳು** | **ಉತ್ತರಗಳು** |
| ಅ | ರಾಜ್ಯದಲ್ಲಿ ಜಾಗತಿಕ ಮಾರುಕಟ್ಟೆಯ ವ್ಯತ್ಯಾಸದಿಂದ ರೇಷ್ಮೆ ನೂಲಿಗೆ ಬೆಲೆ ಕುಸಿತ ಉಂಟಾದಲ್ಲಿ ರಾಜ್ಯದ ರೇಷ್ಮೆ ಬೆಳೆಗಾರರು ಉತ್ಪಾದಿಸುವ ಗೂಡಿನ ದರ ಕುಸಿತ ಕಂಡ ಸಂದರ್ಭದಲ್ಲಿ ಸರ್ಕಾರದಿಂದ ನೀಡುವ ಪ್ರೋತ್ಸಾಹಧನ/ಬೆಂಬಲ ಬೆಲೆಯ ಮೊತ್ತ ಪ್ರತಿ ಕೆ.ಜಿ.ಗೂಡಿನ ಬೆಲೆ ಎಷ್ಟು; ಯಾವ ಮಾನದಂಡ ಆಧಾರದಲ್ಲಿ ನೀಡಲಾಗುತ್ತಿದೆ; (ವಿವರ ನೀಡುವುದು) | ರೇಷ್ಮೆ ನೂಲಿನ ಬೆಲೆ ಕುಸಿತ ಉಂಟಾದಾಗ ರಾಜ್ಯದ ರೇಷ್ಮೆ ಬೆಳೆಗಾರರು ಉತ್ಪಾದಿಸುವ ಗೂಡಿನ ಕುಸಿತ ಕಂಡ ಸಂದರ್ಭದಲ್ಲಿ ಸರ್ಕಾರವು ಮಧ್ಯ ಪ್ರವೇಶಿಸಿ ರೇಷ್ಮೆ ಗೂಡಿನ ಉತ್ಪಾದನಾ ವೆಚ್ಚದ ಆಧಾರದ ಮೇಲೆ ಪ್ರೋತ್ಸಾಹಧನ ನೀಡಲಾಗುತ್ತಿದೆ.<br><br>• 2020-21ನೇ ಸಾಲಿನಲ್ಲಿ ಕೋವಿಡ್-19 ನಿಂದಾಗಿ ರೇಷ್ಮೆ ಗೂಡಿನ ಧಾರಣೆಗಳು ತೀವ್ರವಾಗಿ ಕುಸಿತ ಕಂಡ ಹಿನ್ನಲೆಯಲ್ಲಿ ರೇಷ್ಮೆ ಬೆಳೆಗಾರರ ಹಿತವನ್ನು ಕಾಪಾಡಲು ಸರ್ಕಾರವು ಪ್ರತಿ ಕೆ.ಜಿ ಮಿಶ್ರತಳಿ ಗೂಡಿಗೆ ರೂ.30/- ರಂತೆ ಹಾಗೂ ದ್ವಿತಳಿ ಗೂಡಿಗೆ ರೂ.50/- ರಂತೆ 78,126 ರೇಷ್ಮೆ ಬೆಳೆಗಾರರಿಗೆ ರೂ.39.86 ಕೋಟಿ ಪ್ರೋತ್ಸಾಹಧನ ನೀಡಲಾಗಿದೆ.<br>• 2021-22ನೇ ಸಾಲಿನಲ್ಲಿ ರೇಷ್ಮೆ ಗೂಡಿನ ಧಾರಣೆಗಳು ಉತ್ತಮವಾಗಿದ್ದುದರಿಂದ ರೇಷ್ಮೆ ಗೂಡಿಗೆ ಪ್ರೋತ್ಸಾಹಧನ ನೀಡಿರುವುದಿಲ್ಲ.<br>• ಡಿಸೆಂಬರ್-2021 ರಿಂದ ಪ್ರಸ್ತುತದವರೆಗೆ ಪ್ರತಿ ಕೆ.ಜಿ. ರೇಷ್ಮೆ ಗೂಡಿಗೆ ರೂ.550/-ಕ್ಕೂ ಮೇಲ್ಪಟ್ಟ ಸರಾಸರಿ ಧಾರಣೆಗಳಿರುವುದರಿಂದ ರೇಷ್ಮೆ ಬೆಳೆಗಾರರು ಉತ್ಪಾದಿಸುವ ಗೂಡಿಗೆ ಉತ್ತಮ ಬೆಲೆಗಳು ದೊರೆಯುತ್ತಿದೆ.<br>• 2022-23ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ರೇಷ್ಮೆ ಬೆಳೆಗಾರರು ಉತ್ಪಾದಿಸಿದ ದ್ವಿತಳಿ ರೇಷ್ಮೆ ಗೂಡನ್ನು ಸರ್ಕಾರಿ ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ಮಾರಾಟ ಮಾಡುವ ಪ್ರತಿ ಟನ್ ರೇಷ್ಮೆ ಗೂಡಿಗೆ 10,000/- ಗಳಂತೆ ಪ್ರೋತ್ಸಾಹಧನ ನೀಡಲು ಘೋಷಿಸಿರುತ್ತಾರೆ. ಅದರಂತೆ ದ್ವಿತಳಿ ಸಂಕರಣ ಪ್ರತಿ ಕೆ.ಜಿ. ರೇಷ್ಮೆ ಗೂಡಿಗೆ ರೂ.10/- ರಂತೆ ಪ್ರೋತ್ಸಾಹಧನ ವಿತರಣೆಯನ್ನು ರೇಷ್ಮೆ ಬೆಳೆಗಾರರಿಗೆ ಮಾಡಲಾಗುತ್ತಿದೆ.<br>ರೇಷ್ಮೆ ಗೂಡು, ಕಚ್ಚಾ ರೇಷ್ಮೆ ಉತ್ಪಾದನೆ, ಧಾರಣೆ ಹಾಗೂ ಮಾರಾಟ ವ್ಯವಸ್ಥೆಯ ಸಮಗ್ರ ಅಧ್ಯಯನ ಕೈಗೊಳ್ಳಲು ಡಾ.ಬಸವರಾಜ ಹೆಚ್.ಪ್ರಾಧ್ಯಾಪಕರು, ಕೃಷಿ ಅರ್ಥಶಾಸ್ತ್ರ ವಿಭಾಗ, ಕೃಷಿ ವಿಶ್ವವಿದ್ಯಾಲಯ, ಧಾರವಾಡ ಇವರ ಅಧ್ಯಕ್ಷತೆಯಲ್ಲಿ ಸರ್ಕಾರಿ ಆದೇಶ ಸಂ:ತೋಇ /138 /ರೇಕೃವಿ /2015, ದಿನಾಂಕ:25/06/2015ರಲ್ಲಿ ನಡೆದ "ತಾಂತ್ರಿಕ ಸಮಿತಿ" ಸಭೆಯ ಶಿಫಾರಸ್ಸಿನಂತೆ ರೇಷ್ಮೆ ಗೂಡಿನ ಉತ್ಪಾದನಾ ವೆಚ್ಚವನ್ನು ಕಾಲಕಾಲಕ್ಕೆ ಪರಿಷ್ಕರಿಸಿ ಗೂಡಿನ ಕನಿಷ್ಟ ಬೆಲೆ ನಿಗಧಿಪಡಿಸಲು ಸೂಚಿಸಿರುವಂತೆ ರೇಷ್ಮೆ ಗೂಡಿನ ಉತ್ಪಾದನಾ ವೆಚ್ಚವನ್ನು ರೇಷ್ಮೆ ಬೆಳೆಗಾರರಿಂದ ಕ್ಷೇತ್ರಮಟ್ಟದ ಅಧಿಕಾರಿಗಳು ಮಾಹಿತಿ ಸಂಗ್ರಹಿಸಿ ವಿಜ್ಞಾನಿಗಳಿಂದ ಅಧ್ಯಯನ ಮಾಡಿಸಿ ಕನಿಷ್ಟ ಉತ್ಪಾದನಾ ವೆಚ್ಚವನ್ನು ಪ್ರತಿ ವರ್ಷ ನಿಗಧಿಪಡಿಸಲಾಗುವುದು. |

| | | |
|---|---|---|
| ಆ | ಈ ರೀತಿ ರೈತರಿಗೆ ಮೀಸಲಾಗಿಟ್ಟ ಪ್ರೋತ್ಸಾಹಧನ / ಬೆಂಬಲಬೆಲೆಯ ಹಣವನ್ನು ಕಳೆದ ಮೂರು ವರ್ಷಗಳಲ್ಲಿ ಯಾವ - ಯಾವ ಯೋಜನೆಗಳಿಗೆ ವಿನಿಯೋಗಿಸಲಾಗಿದೆ; (ವಿವರ ನೀಡುವುದು). | 2020-21ನೇ ಸಾಲಿನಲ್ಲಿ ಗೂಡಿನ ಧಾರಣೆಗಳು ಕುಸಿತಗೊಂಡ ಸಂದರ್ಭದಲ್ಲಿ ರೂ.39.86 ಕೋಟಿ ಪ್ರೋತ್ಸಾಹಧನವನ್ನು 78,126 ರೇಷ್ಮೆ ಬೆಳೆಗಾರರಿಗೆ ವಿತರಿಸಲಾಗಿರುತ್ತದೆ. 2021-22 ಮತ್ತು 2022-23 (ಪ್ರಸ್ತುತವರೆಗೆ) ಗೂಡಿನ ಧಾರಣೆಗಳು ಉತ್ತಮವಾಗಿರುವುದರಿಂದ ಪ್ರೋತ್ಸಾಹಧನ ವಿತರಿಸುವ ಅಗತ್ಯತೆ ಕಂಡುಬಂದಿರುವುದಿಲ್ಲ.<br>ರೇಷ್ಮೆ ಬೆಳೆಗಾರರ ಹಿತದೃಷ್ಠಿಯಿಂದ ಪ್ರೋತ್ಸಾಹಧನ ವಿತರಣೆಗಾಗಿ ರಾಮನಗರ ಮಾರುಕಟ್ಟೆಗೆ ಪ್ರೋತ್ಸಾಹಧನಕ್ಕೆ ಕಲ್ಪಿಸಿದ್ದ ಲೆಕ್ಕಶೀರ್ಷಿಕೆ 2851-00-107-1-51(106) ಅನುದಾನದಲ್ಲಿ ರೂ.200.00 ಲಕ್ಷಗಳನ್ನು ಮಾರುಕಟ್ಟೆ ಅಧಿಕಾರಿಗಳ ಬ್ಯಾಂಕ್ ಖಾತೆಗೆ ವರ್ಗಾಯಿಸಿ ಬಾಕಿ ಮೊತ್ತವನ್ನು ರೇಷ್ಮೆ ಬೆಳೆಗಾರರಿಗೆ ಪಾವತಿಸಲಾಗಿದೆ. |
| ಇ | ರಾಮನಗರ ಜಿಲ್ಲೆ, ರಾಮನಗರ ತಾಲ್ಲೂಕಿನ ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ರೈತರು ವಹಿವಾಟು ಮಾಡಿದ ರೇಷ್ಮೆ ಗೂಡಿಗೆ ರೀಲರ್‌ರಿಂದ ಎಷ್ಟು ಮೊತ್ತದ ಹಣ ಪಾವತಿಯಾಗಿದೆ ಈ ಯೋಜನೆಯಿಂದ ಪ್ರೋತ್ಸಾಹಧನ/ ಬೆಂಬಲಬೆಲೆ ಪಾವತಿಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಈ ಹಣವನ್ನು ವಸೂಲಿ ಮಾಡಿ ಸರ್ಕಾರಕ್ಕೆ ಪಾವತಿಸಲು ತೆಗೆದುಕೊಂಡ ಕ್ರಮವೇನು; (ಸಂಪೂರ್ಣ ವಿವರ ನೀಡುವುದು). | ಶ್ರೀ ಜೆ.ಎಂ.ಮುನ್ನಿಬಸಯ್ಯ, ರೇಷ್ಮೆ ಉಪ ನಿರ್ದೇಶಕರು (ಅಮಾನತ್ತು) ರವರು ರಾಮನಗರ ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ 569 ರೇಷ್ಮೆ ಬೆಳೆಗಾರರು ವಹಿವಾಟು ಮಾಡಿದ್ದ ರೇಷ್ಮೆ ಗೂಡಿನ ಮೌಲ್ಯವನ್ನು ಪಾವತಿಸದೆ ದಿನಾಂಕ:19/03/2021 ರಿಂದ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಾದ ಕಾರಣ ರೇಷ್ಮೆ ಬೆಳೆಗಾರರ ಹಿತದೃಷ್ಠಿಯಿಂದ ಪ್ರೋತ್ಸಾಹಧನ ವಿತರಣೆಗಾಗಿ ರಾಮನಗರ ಮಾರುಕಟ್ಟೆಗೆ ಹಂಚಿಕೆ ಮಾಡಿದ್ದ ಬಾಕಿ ಮೊತ್ತವನ್ನು ಬೆಳೆಗಾರರಿಗೆ ಪಾವತಿಸಲು ರೇಷ್ಮೆ ಗೂಡು ವಹಿವಾಟು ಮಾಡಿರುವ ರೇಷ್ಮೆ ಬೆಳೆಗಾರರಿಗೆ ಪಾವತಿಸುವ ಉದ್ದೇಶಕ್ಕಾಗಿ, ಸರ್ಕಾರದ ಆದೇಶ ಸಂಖ್ಯೆ: ರೇಷ್ಮೆ 90 ರೇಕೃವಿ 2021 ದಿನಾಂಕ: 26-03-2021 ರಲ್ಲಿ ರೂ. 200.00 ಲಕ್ಷಗಳನ್ನು ಒದಗಿಸಲಾಗಿರುತ್ತದೆ. ಸದರಿ ರೂ.200.00 ಲಕ್ಷಗಳನ್ನು ತಾತ್ಕಾಲಿಕವಾಗಿ ಬಳಸಿಕೊಂಡು ಬೆಳೆಗಾರರ ಬ್ಯಾಂಕ್ ಖಾತೆಗೆ ವಿತರಿಸಲಾಗಿರುತ್ತದೆ.<br>ರೀಲರುಗಳಿಂದ ಬರಬೇಕಾದ ಒಟ್ಟು ರೂ.78,59,000/- (ರೂಪಾಯಿ ಎಪ್ಪತ್ತೆಂಟು ಲಕ್ಷ ಐವತ್ತೊಂಬತ್ತು ಸಾವಿರ ಮಾತ್ರ) ಗಳನ್ನು ದಿನಾಂಕ:05/08/2021ರಂದು ಚೆಕ್ ಸಂಖ್ಯೆ: 001227 ರಲ್ಲಿ ಆಯುಕ್ತರ ಹೆಸರಿನಲ್ಲಿ ಚೆಕ್ ಮೂಲಕ ಸರ್ಕಾರಕ್ಕೆ ಜಮೆ ಮಾಡಲಾಗಿರುತ್ತದೆ. ಬಾಕಿ ಉಳಿಕೆ ಮೊತ್ತ ರೂ.1,21,41,000/- ಲಕ್ಷಗಳನ್ನು (ರೂ.ಒಂದು ಕೋಟಿ ಇಪ್ಪತ್ತೊಂದು ಲಕ್ಷ ನಲವತ್ತೊಂದು ಸಾವಿರ ಮಾತ್ರ) ವಸೂಲಿ ಮಾಡಬೇಕಾಗಿರುತ್ತದೆ. ಆರೋಪಿತರು ದಿನಾಂಕ:24/05/2021 ರಂದು ನೀಡಿರುವ ಹೇಳಿಕೆಯಲ್ಲಿ ರೂ.1,38,23,502/- (ರೂ.ಒಂದು ಕೋಟಿ ಮೂವತ್ತೆಂಟು ಲಕ್ಷ ಇಪ್ಪತ್ತಮೂರು ಸಾವಿರದ ಐದುನೂರ ಎರಡು ಮಾತ್ರ) ಗಳಿಗೆ ತಾವೇ ಜವಾಬ್ದಾರರಾಗಿರುವುದರಿಂದ ಸದರಿ ಮೊತ್ತವನ್ನು ಬ್ಯಾಂಕಿಗೆ ಜಮಾ ಮಾಡಲು ಕಾಲಾವಕಾಶವನ್ನು ಕೋರಿರುತ್ತಾರೆ.<br>ಪ್ರಸ್ತುತ ಸದರಿ ಪ್ರಕರಣಕ್ಕೆ ರಾಮನಗರ ಘನ ನ್ಯಾಯಾಲಯದಲ್ಲಿ ಕ್ರಿಮಿನಲ್ ದಾವೆ ದಾಖಲಿಸಲಾಗಿದೆ ಮತ್ತು ಇಲಾಖಾ ಮಟ್ಟದಲ್ಲಿ ನಿವೃತ್ತ ಜಿಲ್ಲಾ ನ್ಯಾಯಾಧೀಶರಿಗೆ ವಿಚಾರಣೆ ನಡೆಸಲು ಹಾಗೂ ವರದಿ ಸಲ್ಲಿಸುವಂತೆ ಪ್ರಕರಣವನ್ನು ವಹಿಸಲಾಗಿದೆ. |

**ಕಡತ ಸಂಖ್ಯೆ : ರೇಷ್ಮೆ 215 ರೇಸವಿ 2022**

(ಡಾ.ನಾರಾಯಣಗೌಡ)
**ರೇಷ್ಮೆ, ಯುವಸಬಲೀಕರಣ ಮತ್ತು**
**ಕ್ರೀಡಾ ಸಚಿವರು**